**II Semester 3 Year LL.B./V Semester 5 Year B.A. LL.B./B.B.A. LL.B./ VI Semester 5 Year B.A. LL.B. (Maj.-Min. System)/B.B.A. LL.B. Examination, June/July 2018**

# CONTRACT – II

**(Old/New Batch)**

Duration : 3 Hours

Max. Marks : 100

**Instructions :** 1. Answer **Q.No. 9** and **any five** of the remaining questions.

2. Q.No. **9** carries **20** marks and the remaining questions carry **16** marks **each**.

3. Answers should be written either in **English** or **Kannada completely**.

Q. No. 1. What is Contract of Guarantee ? Explain the various modes of discharge of surety from his liability. Marks : 16

ಜಾಮೀನುದಾರಿಕೆ ಕರಾರು ಎಂದರೇನು ? ಜಾಮೀನುದಾರನನ್ನು ಹೊಣೆಗಾರಿಕೆಯಿಂದ ವಿಮುಕ್ತಿಗೊಳಿಸುವ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 2. Define pledge. State the circumstances in which non-owner can make a valid pledge. Marks : 16

ಒತ್ತೆ (ಗಿರವಿ)ಯನ್ನು ವ್ಯಾಖ್ಯಾನಿಸಿರಿ. ಮಾಲಕನಲ್ಲದವನು ಒತ್ತೆ ಇಡಬಹುದಾದ ಸಂದರ್ಭಗಳನ್ನು ವಿವರಿಸಿರಿ.

Q. No. 3. What is Agency ? Discuss the maxim "Delegatus non potest delegare" Under agency. Marks : 16

ಕಾರ್ಯಭಾರ ಎಂದರೇನು ? ಕಾರ್ಯಭಾರದಡಿಯಲ್ಲಿ "ಒಬ್ಬನು ತನ್ನ ಅಧಿಕಾರವನ್ನು ಇನ್ನೊಬ್ಬನಿಗೆ ವಹಿಸಿಕೊಡಲಾರ' ಎಂಬ ನಿಯಮವನ್ನು ಚರ್ಚಿಸಿರಿ.

Q. No. 4. Explain the rights and duties of partners. Marks : 16

ಪಾಲುದಾರರ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ವಿವರಿಸಿರಿ.

Q. No. 5. Explain the rights of an unpaid seller. Marks : 16

ಹಣ ಸಂದಾಯವಾಗದ ಮಾರಾಟಗಾರನ ಹಕ್ಕುಗಳನ್ನು ವಿವರಿಸಿರಿ.

P.T.O.

https://www.ksluonline.com

Q. No. 6. Define contract of indemnity. Write the distinctions between contract of indemnity and guarantee. Marks : 16

ನಷ್ಟ ಭರ್ತಿ ಕರಾರನ್ನು ವ್ಯಾಖ್ಯಾನಿಸಿರಿ. ನಷ್ಟ ಭರ್ತಿ ಮತ್ತು ಜಾಮೀನುದಾರಿಕೆ ಕರಾರುಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

Q. No. 7. Explain the doctrine of "Caveat emptor" and state the exceptions to it. Marks : 16

''ಕೊಳ್ಳುವವನೇ ಎಚ್ಚರ'' ಸಿದ್ಧಾಂತವನ್ನು ವಿವರಿಸಿರಿ ಮತ್ತು ಅದಕ್ಕಿರುವ ಅಪವಾದಗಳನ್ನು ತಿಳಿಸಿ.

Q. No. 8. Write short note on **any two** of the following : Marks : 2×8=16

ಕೆಳಗಿನವುಗಳಲ್ಲಿ ಯಾವುದೇ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Rights of Bailee.
ನಿಕ್ಷೇಪಿತನ (ಸರಕು ಪಡೆದವನ) ಹಕ್ಕುಗಳು.

(b) Creation of agency.
ಕಾರ್ಯಭಾರದ ರಚನೆ.

(c) Effects of non-registration of partnership firm.
ಪಾಲುಗಾರಿಕೆ ಸಂಸ್ಥೆಯ ನೋಂದಣಿಯಾಗದಿರುವಿಕೆಯ ಪರಿಣಾಮಗಳು.

Q. No. 9. Solve **any two** of the following : Marks : 2×10=20

ಕೆಳಗಿನ ಸಮಸ್ಯೆಗಳಲ್ಲಿ ಯಾವುದೇ **ಎರಡನ್ನು** ಬಗೆಹರಿಸಿರಿ :

(a) 'A' gives authority to 'B' to sell A's land and to pay himself, out of the proceeds, the debt due to him from 'A'. Subsequently. 'A' revokes authority given to 'B'. Can he do so ? Decide.

'ಅ' ನು 'ಬ' ನಿಗೆ ತನ್ನ ಜಮೀನನ್ನು ಮಾರಾಟ ಮಾಡುವ ಅಧಿಕಾರ ಕೊಡುತ್ತಾನೆ ಮತ್ತು ಅದರಿಂದ ಬರುವ ಹಣವನ್ನು 'ಅ' ನು 'ಬ' ನಿಗೆ ಪಾವತಿಸಬೇಕಾದ ಸಾಲಕ್ಕೆ ಜಮಾ ಮಾಡಿಕೊಳ್ಳುವ ಅಧಿಕಾರವನ್ನು 'ಬ' ನಿಗೆ ಕೊಡುತ್ತಾನೆ. ಆನಂತರ 'ಅ' ನು 'ಬ' ನಿಗೆ ಕೊಟ್ಟ ಅಧಿಕಾರವನ್ನು ಹಿಂತೆಗೆದುಕೊಳ್ಳುತ್ತಾನೆ. ಅವನು ಹಾಗೆ ಮಾಡಬಹುದೇ ? ನಿರ್ಣಯಿಸಿರಿ.

https://www.ksluonline.com

(b) Prashant for family use purchased milk from Anand, a milk dealer. The milk contained germs of typhoid fever. Prashant's wife, after consuming the milk, was infected and she died. Prashant intends to institute a suit against Anand to recover damages. Advise Prashant.

ಪ್ರಶಾಂತನು ಆನಂದನೆಂಬ ಹಾಲಿನ ವ್ಯಾಪಾರಿಯಿಂದ ಕುಟುಂಬದ ಉಪಯೋಗಕ್ಕಾಗಿ ಹಾಲನ್ನು ಖರೀದಿ ಮಾಡಿದನು. ಆ ಹಾಲು ವಿಷಮ ಜ್ವರ ಜಂತನ್ನು ಒಳಗೊಂಡಿತ್ತು. ಆ ಹಾಲನ್ನು ಸೇವಿಸಿದ ಪ್ರಶಾಂತನ ಹೆಂಡತಿಯು ಆ ರೋಗಾಣು ಸೋಂಕಿನಿಂದ ಮೃತಳಾದಳು. ಪ್ರಶಾಂತನು ಆನಂದನ ವಿರುದ್ಧ ದಾವೆಯನ್ನು ಹೂಡಿ ನಷ್ಟ ಪರಿಹಾರ ವಸೂಲಿ ಮಾಡಲು ಬಯಸುತ್ತಾನೆ. ಪ್ರಶಾಂತನಿಗೆ ಸಲಹೆಯನ್ನು ನೀಡಿರಿ.

(c) 'A' lends a horse to 'B' for his own riding only. 'B' allows 'C', a member of his family, to ride the horse. 'C' rides with care, but the horse accidentally falls and is injured. Is 'B' liable to 'A' ? Decide.

'ಅ' ನು ತನ್ನ ಕುದುರೆಯನ್ನು ಕೇವಲ 'ಬ'ನು ಸವಾರಿ ಮಾಡಲಿಕ್ಕಾಗಿ 'ಬ' ನಿಗೆ ಎರವಲಾಗಿ ಕೊಡುತ್ತಾನೆ. 'ಬ'ನು ಅದನ್ನು ತನ್ನ ಕುಟುಂಬದ ಸದಸ್ಯನಾದ 'ಕ' ನಿಗೆ ಸವಾರಿ ಮಾಡಲು ನೀಡುತ್ತಾನೆ. 'ಕ' ನು ಜಾಗೃತಿಯಿಂದ ಸವಾರಿ ಮಾಡುವಾಗ ಆ ಕುದುರೆಯು ಆಕಸ್ಮಿಕವಾಗಿ ಬಿದ್ದು ಗಾಯಗೊಳ್ಳುತ್ತದೆ. 'ಬ' ನು 'ಅ'ನಿಗೆ ಹೊಣೆಗಾರನಾಗುತ್ತಾನೆಯೇ ? ನಿರ್ಣಯಿಸಿರಿ.

https://www.ksluonline.com